# ಕರ್ನಾಟಕ ರಾಜ್ಯ ವ್ಯಾಪ್ತಿಯ ಮತದಾರ ಪಟ್ಟಿಯನ್ನು ಮುದ್ರಿಸುವ ಕುರಿತಂತೆ ದಿನಾಂಕ: 20-09-2017 ರಂದು ನಡೆದ ಪೂರ್ವಭಾವಿ ಬಿಡ್ ಸಭೆಯ ನಡವಳಿ.

**ಸಭೆಯಲ್ಲಿ ಹಾಜರಿದ್ದವರು:**

ಶ್ರೀ ರಮೇಶ್ ಕೆ.ಎನ್. ಜಂಟಿ ಮುಖ್ಯ ಚುನಾವಣಾಧಿಕಾರಿಗಳು—ಅಧ್ಯಕ್ಷತೆ.

ಶ್ರೀ ಎಸ್.ಎನ್.ರಾಮಕೃಷ್ಣ, ಸಹಾಯಕ ಮುಖ್ಯ ಚುನಾವಣಾಧಿಕಾರಿ,

ಶ್ರೀ ಎನ್. ರಾಜು, ತಾಂತ್ರಿಕ ಸಮಾಲೋಚಕರು,

ಶ್ರೀ ಪಿ.ಟಿ. ಕುಲಕರ್ಣಿ, ಸಮಾಲೋಚಕರು,

ಹಾಗೂ 12 ಜನ ಬಿಡ್‌ದಾರರು (ಪಟ್ಟಿ ಲಗತ್ತಿಸಿದೆ).

ಜಂಟಿ ಮುಖ್ಯ ಚುನಾವಣಾಧಿಕಾರಿಗಳು ಮೊದಲಿಗೆ ಸಭೆಯಲ್ಲಿ ಹಾಜರಿದ್ದವರಿಗೆ ಸ್ವಾಗತ ಕೋರುತ್ತಾ ಸಭೆಯನ್ನು ಪ್ರಾರಂಭಿಸಿದರು.

ಇ-ಸಂಗ್ರಹಣಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾದ ಬಿಡ್ ದಾಖಲೆಯ ಪ್ಯಾರಾ 7.03 ಯಲ್ಲಿ ಸಣ್ಣ ತಪ್ಪಾಗಿದ್ದು, ಈ ಕೆಳಕಂಡಂತೆ ಓದಿಕೊಳ್ಳುವಂತೆ ಕೋರಲಾಯಿತು.

| Sl. No. | Name of the District / Sub District | No. of Assembly Constituencies |
|---|---|---|
| 19 | Gulbarga | 9 |
| Total no. of Assembly Constituencies in the State | | 224 |

ದಿನಾಂಕ: 11-09-2017 ರಂದು ಕರ್ನಾಟಕ ರಾಜ್ಯ ಇ-ಸಂಗ್ರಹಣ ವೆಬ್‌ಸೈಟ್‌ನಲ್ಲಿ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿನ ಭಾವಚಿತ್ರ ಮತದಾರ ಪಟ್ಟಿಯನ್ನು ಮುದ್ರಿಸುವ ಕುರಿತಂತೆ ಪ್ರಕಟಿಸಲಾದ ಟೆಂಡರ್ ಪ್ರಕಟಣೆ ಕುರಿತಂತೆ ಟೆಂಡರ್ ದಾಖಲೆಗೆ ಸಂಬಂಧಿಸಿದಂತೆ ನ್ಯೂನತೆ/ಸ್ಪಷ್ಟೀಕರಣ ಕುರಿತಂತೆ ಸಲಹೆ/ಸೂಚನೆಗಳ ಬಗ್ಗೆ ಪ್ರಸ್ತಾಪಿಸಲು ಸಭೆಯಲ್ಲಿ ಹಾಜರಿದ್ದ ಬಿಡ್‌ದಾರರುಗಳನ್ನು ಜಂಟಿ ಮುಖ್ಯ ಚುನಾವಣಾಧಿಕಾರಿಗಳು ಕೋರಿದರು. ಅದರಂತೆ ಈ ಸಭೆಯಲ್ಲಿ ಭಾಗವಹಿಸಲಾದ ಶ್ರೀ ಭಾಸ್ಕರ್, ಪ್ಯಾರಾಮೌಂಟ್ ಕಲರ್ ಗ್ರಾಫಿಕ್ಸ್, ಬೆಂಗಳೂರು ಇವರು ಭಾವಚಿತ್ರ ಮತದಾರ ಪಟ್ಟಿಯನ್ನು ಮುದ್ರಿಸುವ ಕುರಿತು ಪುಟ(page)/ಹಾಳೆ(sheet) ಇವುಗಳ ನಡುವಿನ ವ್ಯತ್ಯಾಸದ ಬಗ್ಗೆ ಪ್ರಸ್ತಾಪಿಸಿರುತ್ತಾರೆ ಮತ್ತು ಶ್ರೀ ಮಂಜುನಾಥ ಗುಂಡಾಲ್, ಗುಂಡಾಲ್ ಬಿಸಿನೆಸ್ಸ್ ಡಾಟಾ ಸೊಲ್ಯೂಷನ್ಸ್, ದಾವಣಗೆರೆ ಇವರು ಇ-ಪೋರ್ಟಲ್‌ನಲ್ಲಿ ಒಂದಕ್ಕಿಂತ ಹೆಚ್ಚು ಜಿಲ್ಲೆಗಳನ್ನು ಆಯ್ಕೆ ಮಾಡಿದಾಗ ನಮೂದಿಸಲಾಗುವ ಇ.ಎಂ.ಡಿ ಮೊತ್ತ ಪ್ರಸ್ತುತ ರೂ. 1,00,000/-ಗಳನ್ನು ತೋರಿಸುತ್ತಿರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

...2

ಮೇಲ್ಕಂಡ ಎರಡು ಅಂಶಗಳ ಬಗ್ಗೆ ಜಂಟಿ ಮುಖ್ಯ ಚುನಾವಣಾಧಿಕಾರಿಗಳು ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಿರುತ್ತಾರೆ.

1) ದರಪಟ್ಟಿ ನೀಡುವಾಗ per page ಅಥವಾ per side ಎಂದು ಓದಿಕೊಳ್ಳಬೇಕು. (one side OR one page printing rate only)

2) ಒಂದಕ್ಕಿಂತ ಹೆಚ್ಚು ಜಿಲ್ಲೆಗಳನ್ನು ಆಯ್ಕೆ ಮಾಡಿದಾಗ ರೂ: 1,00,000-00 ಕ್ಕಂತ ಹೆಚ್ಚು ಮೊತ್ತ ಇ-ಸಂಗ್ರಹಣಾ ವೆಬ್‌ಸೈಟ್‌ನಲ್ಲಿ ದಾಖಲಿಸಲು ಅನುಕೂಲ ಮಾಡಿಕೊಡಬೇಕೆಂದು ಇ-ಸಂಗ್ರಹಣಾ ಇಲಾಖೆಯನ್ನು ಕೋರಲಾಗುವುದು.

ಈ ಕುರಿತಂತೆ ಅಧಿಕೃತವಾಗಿ ಆಯೋಗದ ವೆಬ್‌ಸೈಟ್‌ನಲ್ಲಿ ಅಥವಾ ಇ-ಪೋರ್ಟಲ್‌ನಲ್ಲಿ ಸ್ಪಷ್ಟೀಕರಣ ವಿವರವನ್ನು ನೀಡುವುದಾಗಿ ತಿಳಿಸುತ್ತಾ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು.

ಜಂಟಿ ಮುಖ್ಯ ಚುನಾವಣಾಧಿಕಾರಿಗಳು
(ತಾಂತ್ರಿಕ) 23/05/17
ಸಿಆಸುಇ (ಚುನಾವಣೆಗಳು).